# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ





ಅಧಿವಕ್ತಾ ಪರಿಷತ್ ಬೆಂಗಳೂರು ಘಟಕದ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಬೆಂಗಳೂರಿನ ಗಾಂಧಿ ಭವನದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಕೆ.ಎಸ್. ಮುದುಗಲ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಪ್ರಮುಖ ಭಾಷಣ ಮಾಡಿದರು.


ಸಂಪುಟ : 44 | ಸಂಚಿಕೆ : 24 | ಚೈತ್ರ–ವೈಶಾಖ | ಕಲಿಯುಗಾಬ್ದ 5125 | 01–04–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಪ್ರಜಾಪ್ರಭುತ್ವವೇ ಭಾರತದ ಜೀವಾಳ, ಮತದಾನವೇ ಪ್ರಜಾಪ್ರಭುತ್ವದ ಆಧಾರ

ವಿಶ್ವದ ಅತ್ಯಂತ ಬೃಹತ್ ಲಿಖಿತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ರಾಷ್ಟ್ರ ನಮ್ಮದು. ಭಾರತದಲ್ಲಾಗುವ ಲೋಕಸಭಾ ಚುನಾವಣೆಯನ್ನಂತೂ ಜಗತ್ತು ಬೆರಗುಗಣ್ಣಿನಿಂದ ನೋಡುತ್ತದೆ. ಜಗತ್ತಿನ ಎರಡನೇ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ನಾಡಿನಲ್ಲಿ ಸುಸೂತ್ರವಾಗಿ ಮತ್ತು ಪಾರದರ್ಶಕವಾಗಿ ಚುನಾವಣೆಯನ್ನು ನಡೆಸಬಹುದೇ? ಎನ್ನುವುದೇ ಅವರೆಲ್ಲರ ಅಚ್ಚರಿಗೆ ಕಾರಣ. ಜಗತ್ತಿನ ಅಚ್ಚರಿಗೆ ಕಾರಣವಾಗುವಂತಹ ಚುನಾವಣಾ ವ್ಯವಸ್ಥೆಯನ್ನು ಅಳವಡಿಸಿಕೊಂಡು ನಮ್ಮ ಸಮಾಜ ಗೆದ್ದಿದೆ. ಆದರೆ ವೈಯಕ್ತಿಕವಾಗಿ ಮತದಾನ ಮಾಡುವ, ಮತದಾನಕ್ಕೆ ಜಾಗೃತಿ ಮೂಡಿಸುವ ನಮ್ಮ ಕರ್ತವ್ಯವನ್ನು ನಾವು ಪಾಲಿಸಿ 'ಪ್ರಜೆಯೇ ಪ್ರಭು' ಎನ್ನುವುದನ್ನು ಸಾಕಾರಗೊಳಿಸಿದ್ದೇವೆಯೇ? ಎನ್ನುವ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಂಡಾಗ ನಮ್ಮ ಕರ್ತವ್ಯದ ಅರಿವು ನಮಗಾಗುತ್ತದೆ.

ಸಂವಿಧಾನಾತ್ಮಕವಾಗಿ ನಮಗೆ ಮೂಲಭೂತ ಹಕ್ಕುಗಳು ದೊರೆತಿವೆ ಮತ್ತು ಅವುಗಳನ್ನು ನಾವು ನಮ್ಮ ಪ್ರಾಶಸ್ತ್ಯದ ಆಧಾರದ ಮೇಲೆ ಬಳಸಿಕೊಳ್ಳುತ್ತಿದ್ದೇವೆ. ನಮಗಿರುವ ಮೂಲಭೂತ ಹಕ್ಕುಗಳಲ್ಲಿ ಮತದಾನ ಮಾಡುವ ಹಕ್ಕು ಕೂಡ ಪ್ರಮುಖವಾದದ್ದು. ಆದರೆ ಉಳಿದ ಮೂಲಭೂತ ಹಕ್ಕುಗಳಿಗೆ ನಾವು ನೀಡುವ ಪ್ರಾಶಸ್ತ್ಯ ಮತದಾನದ ಹಕ್ಕಿಗೆ ನೀಡುತ್ತಿಲ್ಲ ಎನ್ನುವುದನ್ನು ಮತದಾನ ಪ್ರಮಾಣದ ಅಂಕಿಅಂಶಗಳು ಖಚಿತ ಪಡಿಸುತ್ತವೆ. ಅದರಲ್ಲೂ ಶಿಕ್ಷಿತರನ್ನು ಒಳಗೊಂಡ ಕ್ಷೇತ್ರಗಳಲ್ಲೇ ಮತದಾನದ ಪ್ರಮಾಣ ಕಡಿಮೆ ಎಂಬ ಸುದ್ದಿ ನಿಜಕ್ಕೂ ನಮ್ಮ ಜವಾಬ್ದಾರಿಯ ಅವಲೋಕನವನ್ನು ಮಾಡುವ ಅನಿವಾರ್ಯತೆಯನ್ನು ತಿಳಿಸುತ್ತದೆ.

ಮತದಾನದ ಹಕ್ಕನ್ನು ನಾವು ನಮಗಿರುವ ಸವಲತ್ತೆಂದು ಸುಮ್ಮನಾಗದೆ, ಅದು ನಮ್ಮ ಕರ್ತವ್ಯವೆಂದು ಕಾರ್ಯಪ್ರವೃತ್ತರಾದಾಗ ಮಾತ್ರ ಪ್ರಜಾಪ್ರಭುತ್ವ ಸದೃಢಗೊಳ್ಳುತ್ತದೆ. ಮೂಲಭೂತ ಹಕ್ಕುಗಳನ್ನು ಚಲಾಯಿಸುವ ಜೊತೆಗೆ, ಮೂಲಭೂತ ಕರ್ತವ್ಯಗಳನ್ನೂ ಪಾಲಿಸುವುದು ನಮ್ಮ ಪ್ರಾಶಸ್ತ್ಯವಾಗಬೇಕು. ನಮ್ಮ ಕರ್ತವ್ಯವನ್ನು ಪಾಲಿಸುವ ಮೂಲಕ ಸಮರ್ಥ ವ್ಯವಸ್ಥೆಯ ರಚನೆಯಲ್ಲಿ ಪಾಲುದಾರರಾಗಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿ. ಏಕೆಂದರೆ ವ್ಯವಸ್ಥೆಯ ಭಾಗವಾದವರಿಗೆ ಮಾತ್ರ, ವ್ಯವಸ್ಥೆಯನ್ನು ಸರಿಪಡಿಸುವುದಕ್ಕಾಗಿ ದೂರುವ ನೈತಿಕತೆ ಇರುತ್ತದೆ.

### ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸುವುದು ಹೇಗೆ?


- ನಿಮ್ಮ ಹತ್ತಿರದ ಎಲೆಕ್ಟೋರಲ್ ರಿಜಿಸ್ಟ್ರೇಷನ್ ಆಫೀಸರ್(ERO) ಅಥವಾ ಬೂತ್ ಲೆವೆಲ್ ಆಫೀಸರ್(BLO)ಇವರಿಂದ ಫಾರಮ್–6 ಅನ್ನು ಪಡೆದುಕೊಂಡು ನೋಂದಾಯಿಸಬಹುದು.
- ಆನ್‌ಲೈನ್‌ನಲ್ಲಿ www.nvsp.in ನಲ್ಲಿ ಫಾರಮ್ 6 ಅನ್ನು ಡೌನ್‌ಲೋಡ್ ಮಾಡಿ ಅದನ್ನು ಭರ್ತಿ ಮಾಡಿ ಅಲ್ಲೇ ಅಪ್‌ಲೋಡ್ ಮಾಡಬಹುದು ಅಥವಾ ಅದನ್ನು ಪ್ರಿಂಟ್ ತೆಗೆದು ಹತ್ತಿರದ ERO ಅಥವಾ BLOಗೆ ತಲುಪಿಸಬಹುದು ಅಥವಾ ಪೋಸ್ಟ್ ಮೂಲಕ ಕಳಿಸಬಹುದು.

### ಫಾರಮ್–6 ಭರ್ತಿ ಮಾಡಲು ಬೇಕಾಗುವ ದಾಖಲೆಗಳು:

- ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ
- ವಯಸ್ಸು ಮತ್ತು ವಾಸ ದೃಢೀಕರಣ ಪತ್ರ
- ವಯಸ್ಸು ಮತ್ತು ವಾಸ ದೃಢೀಕರಣಕ್ಕೆ ಅಗತ್ಯ ದಾಖಲೆಗಳನ್ನು ಫಾರಮ್ 6ನಲ್ಲೇ ನಮೂದಿಸಲಾಗಿದ್ದು, ಅದನ್ನು ಫಾರಮ್–6 ತುಂಬಿಸುವಾಗ ಲಗತ್ತಿಸುವುದು.
- 18–21 ವಯಸ್ಸಿನವರು ಸ್ವಯಂದೃಢೀಕರಣ ಪತ್ರವನ್ನು ತಮ್ಮ ಸ್ವವಿವರ, ಸಹಿ ಮತ್ತು ಉಚಿತ ದಾಖಲೆಗಳೊಂದಿಗೆ ಲಗತ್ತಿಸುವುದು.

### ಚುನಾವಣಾ ಗುರುತಿನ ಚೀಟಿ ಪಡೆಯುವುದು ಹೇಗೆ?

- EPIC - electors photo identity card ಅಂದರೆ ಚುನಾವಣಾ ಗುರುತಿನ ಚೀಟಿಗಾಗಿ ಅರ್ಜಿ ಸಲ್ಲಿಸಿದ ನಂತರ ಹತ್ತಿರದ BLO



ಅಥವಾ ERO ನಿಮ್ಮ ವಾಸಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಾರೆ.
- ಅರ್ಜಿ ಸಲ್ಲಿಕೆಯಾಗಿ ವಾಸ ದೃಢೀಕೃತವಾದಲ್ಲಿ ವೋಟರ್ ಐಡಿಯನ್ನು ಅಂಚೆಯ ಮೂಲಕ ತಲುಪಿಸಲಾಗುತ್ತದೆ ಅಥವಾ ಹತ್ತಿರದ ಎಲೆಕ್ಟೋರಲ್ ಆಫೀಸ್‌ನಿಂದ ವೋಟರ್ ಐಡಿಯನ್ನು ಬಂದು ತೆಗೆದುಕೊಂಡು ಹೋಗಲು ಕರೆ ಮಾಡಲಾಗುತ್ತದೆ.

### ನಿಮ್ಮ ವಿಳಾಸ ಬದಲಾಗಿದೆಯೇ?

- ಅದೇ ಮತಕ್ಷೇತ್ರದಲ್ಲಾದರೆ ಹತ್ತಿರದ BLO ಕಚೇರಿಯಲ್ಲಿ ಫಾರಮ್–8A ತುಂಬಿಸುವುದು ಅಥವಾ ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಸಲ್ಲಿಸುವುದು.
- ಬೇರೆ ಮತಕ್ಷೇತ್ರಕ್ಕೆ ಮನೆ ಬದಲಾವಣೆ ಮಾಡಿದ್ದರೆ ಮೇಲೆ ಹೇಳಿದಂತೆ ಹೊಸದಾಗಿ ಫಾರಮ್–6 ಅನ್ನು ಸಲ್ಲಿಸುವುದು.
- ನಿಮ್ಮ ಚುನಾವಣಾ ಗುರುತಿನ ಚೀಟಿಯಲ್ಲಿ ವಿಳಾಸ ಬದಲಾವಣೆಯಾಗ ಬೇಕಿದ್ದಲ್ಲಿ ಬದಲಾದ ವಿಳಾಸಕ್ಕೆ ಹತ್ತಿರದ ERO ಕಚೇರಿಯಲ್ಲಿ 25 ರೂಪಾಯಿಗಳನ್ನು ಪಾವತಿಸಿ ಅರ್ಜಿ ಸಲ್ಲಿಸತಕ್ಕದ್ದು, ಆಗ ಗುರುತಿನ ಚೀಟಿಯಲ್ಲಿ ಬದಲಾದ ವಿಳಾಸದಲ್ಲಿ ಅದೇ ನಂಬರ್ ಮುಂದುವರೆಯುತ್ತದೆ.

### ಗುರುತಿನ ಚೀಟಿಯಲ್ಲಿ ತಪ್ಪುಗಳಾಗಿವೆಯೇ?

- ಫಾರಮ್–8 ಅನ್ನು ಹತ್ತಿರದ ERO ಕಚೇರಿಯಲ್ಲಿ ಸಲ್ಲಿಸುವುದು
- ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿ ಅದನ್ನು ಭರ್ತಿ ಮಾಡಿ ಅಲ್ಲೇ ಅಪ್‌ಲೋಡ್ ಮಾಡಬಹುದು ಅಥವಾ ಅದನ್ನು ಪ್ರಿಂಟ್ ತೆಗೆದು ಹತ್ತಿರದ ERO ಅಥವಾ BLOಗೆ ತಲುಪಿಸಬಹುದು ಅಥವಾ ಪೋಸ್ಟ್ ಮೂಲಕ ಕಳಿಸಬಹುದು. ಮಾಡಿಕೊಂಡು ಸಲ್ಲಿಸುವುದು.

### ಮತದಾರರ ಪಟ್ಟಿಯಿಂದ ಹೆಸರನ್ನು ತೆಗೆಯಬೇಕೆ?

- ಪ್ರಸ್ತುತ ಮತದಾರರ ಪಟ್ಟಿಯಿಂದ ಹೆಸರನ್ನು ತೆಗೆಯಲು ಫಾರಮ್–7 ಅನ್ನು ಸಲ್ಲಿಸಬಹುದು.
- ಮತದಾರರ ಪಟ್ಟಿಯಿಂದ ಈ ಕೆಳಗಿನ ಕಾರಣಕ್ಕೆ ತೆಗೆಯಬಹುದು:
  1. ವಿಳಾಸ ಬದಲಾವಣೆಯಾಗಿರುವುದು
  2. ವ್ಯಕ್ತಿ ಮೃತನಾಗಿರುವುದು
  3. ಬೇರೆ ಇನ್ನ್ಯಾವುದೇ ಕಾರಣಕ್ಕೆ ಮತದಾನಕ್ಕೆ ಅನರ್ಹಗೊಂಡಿದ್ದು

### ಅರ್ಜಿ ಎಲ್ಲಿ ಸಲ್ಲಿಸಬೇಕು ?

- ಹತ್ತಿರದ ERO ಅಥವಾ BLO ಕಚೇರಿಯಲ್ಲಿ ಸಲ್ಲಿಸುವುದು
- ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿ ಅದನ್ನು ಭರ್ತಿ ಮಾಡಿ ಅಲ್ಲೇ ಅಪ್‌ಲೋಡ್ ಮಾಡಬಹುದು ಅಥವಾ ಅದನ್ನು ಪ್ರಿಂಟ್ ತೆಗೆದು ಹತ್ತಿರದ ERO ಅಥವಾ BLOಗೆ ತಲುಪಿಸಬಹುದು ಅಥವಾ ಪೋಸ್ಟ್ ಮೂಲಕ ಕಳಿಸಬಹುದು. ಮಾಡಿಕೊಂಡು ಸಲ್ಲಿಸುವುದು.

### ನಾವೇನು ಮಾಡಬಹುದು?

- ಮತದಾನ ನಮ್ಮ ಹಕ್ಕು. ಹದಿನೆಂಟು ವರ್ಷ ತುಂಬಿದ ಎಲ್ಲರೂ ಮತದಾನವನ್ನು ತಪ್ಪದೇ ಮಾಡಿ.
- ಯುವಕರು ಮತದಾರರ ಪಟ್ಟಿಗೆ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ. ಅಗತ್ಯ ಬಿದ್ದರೆ ತಮ್ಮ ಮನೆಯವರು ಅಥವಾ ಯಾವುದೇ ಶಿಕ್ಷಕರ ಸಹಾಯವನ್ನು ಪಡೆಯಿರಿ.
- ನಿಮ್ಮ ಮನೆಯಲ್ಲಿ ಮತದಾನ ಮಾಡಲು ಅರ್ಹರಾದ ಸದಸ್ಯರು ತಪ್ಪದೇ ಮತದಾನ ಮಾಡುವಂತೆ ನೋಡಿಕೊಳ್ಳಿ. ಮತದಾನ ಮಾಡಲು ಅರ್ಹರಾದ ಮನೆಯ ಸುತ್ತಮುತ್ತಲಿನ ವ್ಯಕ್ತಿಗಳಿಗೆ ಮತದಾನ ಮಾಡಲು ಪ್ರೇರೇಪಿಸಿ.
- ಮತದಾನದ ದಿನ ಬೇಕಾದ ದಾಖಲೆ ಪತ್ರಗಳನ್ನು ತಪ್ಪದೆ ಜೊತೆಗೆ ಕೊಂಡೊಯ್ಯಿರಿ.
- ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗದಿರಿ ಮತ್ತು ಪ್ರೋತ್ಸಾಹಿಸದಿರಿ.
- ಮತ ಮಾರಾಟಕ್ಕಲ್ಲ. ಮತದಾನ ಒಂದು ಪವಿತ್ರ ಕರ್ತವ್ಯ. ಯಾವುದೇ ಆಮಿಷಗಳಿಗೆ, ಪ್ರಲೋಭನೆಗಳಿಗೆ ಒಳಗಾಗದಿರಿ ಮತ್ತು ನಿಮ್ಮ ಮನೆಯವರು, ಸುತ್ತಮುತ್ತಲಿನವರು ಒಳಗಾಗದಂತೆ ಜಾಗ್ರತೆ ವಹಿಸಿ.
- ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾಗಿ ಮತದಾನವನ್ನು ಮಾಡಿ.
- 100% ಮತದಾನ ಮಾಡುವಂತೆ ನಮ್ಮ ಸುತ್ತಮುತ್ತಲಿನ ಮತದಾರ ಬಂಧುಗಳಿಗೆ ವಿನಂತಿ ಮಾಡಿ, ನಮ್ಮ ಪರಿಸರದ ಎಲ್ಲರೂ(100%) ಮತದಾನ ಮಾಡುವಂತೆ ಪ್ರಯತ್ನಿಸ ಬಹುದೇ?
- ವಯಸ್ಸಾದವರಿಗೆ, ಅಂಗವಿಕಲರಿಗೆ, ಅಶಿಕ್ಷಿತರಿಗೆ ಮತದಾನ ಪ್ರಕ್ರಿಯೆಯ ಕುರಿತು ಜಾಗೃತಿ ಮೂಡಿಸಿ.
- ಮತಕಟ್ಟೆಗಳಲ್ಲಿ ಭದ್ರತಾ ಸಿಬ್ಬಂದಿಗಳು, ಚುನಾವಣಾ ಅಧಿಕಾರಿಗಳ ಜೊತೆಗೆ ಸಹಕರಿಸಿ.
- ದೇಶಕ್ಕೆ ಹಿತ, ನಿಮ್ಮ ಮತ.


### ಏನೇನು ದಾಖಲೆ ಸಲ್ಲಿಸಬೇಕು?

- ಯಾರ ಹೆಸರನ್ನು ಮತದಾರರ ಪಟ್ಟಿಗೆ ಸೇರಿಬೇಕು ಅಥವಾ ತೆಗೆಯಬೇಕು ಅವರ ವಿವರ
- ಅರ್ಜಿದಾರರ ಹೆಸರು ಮತ್ತು ವಿವರ
- ಅರ್ಜಿದಾರರ ವಿಳಾಸ
- ಅರ್ಜಿ ಸಲ್ಲಿಸಲು ಕಾರಣಗಳು
- ಅಗತ್ಯ ದಾಖಲೆಗಳು ಮತ್ತು ದಾಖಲೆಗಳು ಸರಿಯಾಗಿರುವುದಕ್ಕೆ ದೃಢೀಕರಣ ಪತ್ರ

### ಮತದಾನದ ದಿನ...

- ಮತಗಟ್ಟೆಯಲ್ಲಿ ನಿಮ್ಮ ಹೆಸರು, ಭಾವಚಿತ್ರ ಮತ್ತು ಚುನಾವಣಾ ಗುರುತಿನ ಚೀಟಿಯಲ್ಲಿರುವ ಸಂಖ್ಯೆಯನ್ನು ಪರಿಶೀಲಿಸಲಾಗುತ್ತದೆ.
- ನಂತರ ನಿಮ್ಮ ಗುರುತಿನ ಚೀಟಿಯ ಸಂಖ್ಯೆಗೆ ಅನುಗುಣವಾಗಿ ದಾಖಲೆಗಳಲ್ಲಿ ಮತದಾನ ಮಾಡುತ್ತಿರುವುದನ್ನು ನಮೂದಿಸಿ ಮತದಾನ ಮಾಡಲು ಅವಕಾಶ ನೀಡಲಾಗುತ್ತದೆ.
- ಮತದಾನ ಮಾಡಲಾಗಿದೆ ಎಂದು ನಿಮ್ಮ ತೋರುಬೆರಳಿಗೆ ಇಂಕನ್ನು ಹಚ್ಚಲಾಗುತ್ತದೆ.

## ಸಂಸ್ಮರಣೆ ವಲ್ಲಭಾಚಾರ್ಯರು (1479–1531)



ಭಕ್ತಿಕಾಲದ ಸಗುಣಧಾರೆಯ ಕೃಷ್ಣಭಕ್ತಿ ಶಾಖೆಯ ಆಧಾರಸ್ತಂಭ ಹಾಗೂ ಪುಷ್ಟಿಮಾರ್ಗದ ರಚನಕಾರರಾದ ಶ್ರೀವಲ್ಲಭಾಚಾರ್ಯರ ಪ್ರಾದುರ್ಭಾವ ಸಂವತ್ಸರ 1535, ಚೈತ್ರ ಕೃಷ್ಣ ಏಕಾದಶಿಯಂದು ದಕ್ಷಿಣ ಭಾರತದ ಕಾಂಕರವಾಡ ಗ್ರಾಮದ ತೈಲಂಗ ಬ್ರಾಹ್ಮಣರ ಪತ್ನಿಯಾದ ಇಲಮ್ಮಾಗಾರು ಇವರಿಗೆ ಜನಿಸಿದರು. ಇವರನ್ನು ವೈಶ್ವಾನರನ (ಅಗ್ನಿಯ) ಅವತಾರ ಎಂದು ಕರೆಯಲಾಗುತ್ತದೆ. ಇವರು ವೇದಶಾಸ್ತ್ರಗಳಲ್ಲಿ ಪಾರಂಗತರಾಗಿದ್ದರು.

**ದೀಕ್ಷೆ:** ಶ್ರೀರುದ್ರಸಂಪ್ರದಾಯದ ಶ್ರೀವಿಲ್ವಮಂಗಲಾಚಾರ್ಯಜಿಯವರು ಇವರಿಗೆ 'ಅಷ್ಟದಶಾಕ್ಷರಗೋಪಾಲ' ಮಂತ್ರದ ದೀಕ್ಷೆ ನೀಡಿದರು. ಅನಂತರ ಸ್ವಾಮಿ ನಾರಾಯಣೇಂದ್ರತೀರ್ಥರಿಂದ ತ್ರಿದಂಡ ಸನ್ಯಾಸದ ದೀಕ್ಷೆಯನ್ನು ಪಡೆದರು. ಅವರ ವಿವಾಹವು ಪಂಡಿತ ಶ್ರೀದೇವಭಟ್ಟರ ಮಗಳಾದ ಮಹಾಲಕ್ಷ್ಮಿಯೊಂದಿಗೆ ಜರುಗಿತು, ಕಾಲಾನುಸಾರ ಅವರಿಗೆ ಶ್ರೀಗೋಪಿನಾಥ ಹಾಗೂ ಶ್ರೀವಿಠ್ಠಲನಾಥ ಎಂಬ ಇಬ್ಬರು ಪುತ್ರರಾದರು. ಭಗವಂತನ ಪ್ರೇರಣೆಯಿಂದ ಅವರು ವೃಂದಾವನದ ಗೋಕುಲವನ್ನು ತಲುಪಿದರು. ಆನಂತರ ವೃಂದಾವನದ ಗೋವರ್ಧನ ಪರ್ವತದ ಮೇಲೆ ತಮ್ಮ ಶಿಷ್ಯರಾದ ಪೂರನಮಲ್ ಖತ್ರಿಯವರ ಸಹಾಯದಿಂದ 1576ನೇ ಸಂವತ್ಸರದಲ್ಲಿ ಶ್ರೀನಾಥಜಿಯ ಭವ್ಯ ಮಂದಿರವನ್ನು ನಿರ್ಮಿಸಿದರು. ಅಲ್ಲಿ ವಿಶಿಷ್ಟ ಸೇವಾ–ಪದ್ಧತಿಯೊಂದಿಗೆ ಲೀಲಾ–ಗಾನಗಳನ್ನೊಳಗೊಂಡ ಶ್ರೀ ರಾಧಾಕೃಷ್ಣನ ಅತ್ಯಂತ ಮಧುರ ಲೀಲೆಗಳಿಗೆ ಸಂಬಂಧಿಸಿದ ರಸಮಯ ಪದಗಳ ಸ್ವರ–ಲಹರಿಯನ್ನು ಆಲಿಸಿ ಭಕ್ತಜನರು ಮಂತ್ರಮುಗ್ಧರಾಗುತ್ತಿದ್ದರು. ಇದರ ಅತ್ಯುತ್ತಮ ಉದಾಹರಣೆ ಎಂದರೆ ಶ್ರೀಕೃಷ್ಣನ ರೂಪವನ್ನು ವರ್ಣಿಸುವ 'ಮಧುರಾಷ್ಟಕಮ್'.

**ಶಿಷ್ಯ ಪರಂಪರೆ:** ವಲ್ಲಭಾಚಾರ್ಯರ 84 ಶಿಷ್ಯರಲ್ಲಿ ಅಷ್ಟಛಾಪಕವಿಗಣ– ಭಕ್ತಸೂರದಾಸ, ಕೃಷ್ಣದಾಸ, ಕುಂಭನದಾಸ ಹಾಗೂ ಪರಮಾನಂದದಾಸರು ಪ್ರಮುಖರಿದ್ದಾರೆ. ಶ್ರೀ ಅವಧೂತದಾಸರೆಂಬ ಹೆಸರಿನ ಪರಮಹಂಸ ಶಿಷ್ಯರೂ ಇದ್ದರು. ಸೂರದಾಸರ ನಿಜವಾದ ಭಕ್ತಿ ಹಾಗೂ ಪದಗಳ ರಚನೆಯಲ್ಲಿನ ನಿಪುಣತೆಯನ್ನು ನೋಡಿ ವಿನಯಶೀಲ ಸೂರದಾಸರಿಗೆ ಭಾಗವತದ ಕಥೆಯನ್ನು ಶ್ರವಣ ಮಾಡಿಸಿ ಭಗವಂತನ ಲೀಲಾಗಾನದ ಕಡೆಗೆ ಹೊರಳಿಸಿದರು ಹಾಗೂ ಅವರಿಗೆ ಶ್ರೀನಾಥಮಂದಿರದ ಕೀರ್ತನೆಯ ಸೇವೆಯನ್ನು ನೀಡಿದರು. ತತ್ವಜ್ಞಾನ ಹಾಗೂ ಲೀಲಾಭೇದವನ್ನೂ ಹೇಳಿದರು.

ಶ್ರೀವಲ್ಲಭಗುರು ತತ್ವ ಸುನಾಯೋ ಲೀಲಾ–ಭೇದ ಬತಾಯೋ (ಸೂರಸಾರಾವಲಿ) ಸೂರದಾಸರ ಗುರುಗಳ ಮೇಲಿನ ನಿಷ್ಠೆಯ ದೃಷ್ಟವ್ಯವಿದೆ.

ಭರೋಸೋ ದೃಢ ಇನ
ಚರನನಕೇರೋ ।
ಶ್ರೀವಲ್ಲಭ–ನಖ–ಚಂದ–ಛಟಾ
ಬಿನುಸಬಜಗ ಮಾಂಝು ಅಧೇರೊ ॥

ಶ್ರೀವಲ್ಲಭರ ಪ್ರತಾಪದಿಂದ ಪ್ರಮತ್ತಕುಂಭನದಾಸರಂತೂ ಸಾಮ್ರಾಟ ಅಕ್ಬರ್‌ನ ಶಿರಚ್ಛೇದ ಮಾಡಲೂ ಹೆದರಲಿಲ್ಲ – ಪರಮಾನಂದದಾಸರ ಭಾವಪೂರ್ಣಪದಗಳ ಶ್ರವಣಮಾಡಿ ಮಹಾಪ್ರಭುಗಳು ಬಹಳಷ್ಟು ದಿನಗಳವರೆಗೆ ಅರಿವಿಲ್ಲದೆ ಇದ್ದವರು. ಉಪಾಸ್ಯ ಶ್ರೀನಾಥನು ಕಲಿ–ಮಲ–ಗ್ರಸಿತ ಜೀವಗಳ ಉದ್ಧಾರಕ್ಕಾಗಿ ಶ್ರೀವಲ್ಲಭಾಚಾರ್ಯರ ದುರ್ಲಭ ಆತ್ಮ–ನಿವೇದನ–ಮಂತ್ರವನ್ನು ಪ್ರದಾನಿಸಿದರು ಹಾಗೂ ಗೋಕುಲದ ಠಕೂರಾನಿ ಘಾಟನಲ್ಲಿ ಯಮುನಾರಾಣಿಯು ದರ್ಶನ ನೀಡಿ ಕೃತಾರ್ಥಗೊಳಿಸಿದರು ಎಂದು ಜನರಲ್ಲಿ ಒಂದು ನಂಬಿಕೆ ಇದೆ. ಅಣುಭಾಷ್ಯ (ಬ್ರಹ್ಮಸೂತ್ರ ಭಾಷ್ಯ ಅಥವಾ ಉತ್ತರಮೀಮಾಂಸ)ವು ಅವರ ಶುದ್ಧಾದ್ವೈತವನ್ನು ಪ್ರತಿಪಾದಿಸುವ ಪ್ರಧಾನ ದಾರ್ಶನಿಕ ಗ್ರಂಥವಾಗಿದೆ. ಪೂರ್ವಮೀಮಾಂಸಾಭಾಷ್ಯ, ಭಾಗವತದ ದಶಮ ಸ್ಕಂಧದ ಮೇಲೆ ಸುಬೋಧಿನಿ ಟೀಕೆ, ತತ್ತ್ವದೀಪ ನಿಬಂಧ ಹಾಗೂ ಪುಷ್ಟಿ–ಪ್ರವಾಹ–ಮರ್ಯಾದಾ ಇವು ಪ್ರಮುಖ ಗ್ರಂಥಗಳಾಗಿವೆ. 1587ನೇ ಸಂವತ್ಸರದ ಆಷಾಢ ಶುಕ್ಲ ತೃತಿಯಾದಂದು ಅವರು ಅಲೌಕಿಕ ರೀತಿಯಲ್ಲಿ ಇಹಲೀಲೆಯನ್ನು ಮುಗಿಸಿ ಸದೇಹ ಪ್ರಯಾಣ ಮಾಡಿದರು. ಭಕ್ತಿ ಪುರಸ್ಸರತೆಯ ಜೊತೆಗೆ ಸಮಾಜದಲ್ಲಿ ಸದ್ಗುಣ ಮತ್ತು ಧೈರ್ಯ ಸಾಧನೆಗೆ ಪ್ರೇರಕರಾಗುವಂತೆ ಮಾಡಿದ ಆಚಾರ್ಯರಿಗೆ ಸಮಾಜ ಋಣಿಯಾಗಿದೆ.


## ಪುಂಗವ ಪತ್ರಿಕೆಯ ಪ್ರಾರೂಪ
(ಪ್ರಾರೂಪ–8, ವಿಧಿ – 8)

| | | |
|---|---|---|
| ಪ್ರಕಟಣೆಯ ಸ್ಥಳ | : | #74, ರಂಗರಾವ್ ರಸ್ತೆ, ಶಂಕರಪುರಂ ಬೆಂಗಳೂರು–560004 |
| ಪ್ರಕಾಶಕ | : | **ಕಾ. ಶ್ರೀ. ನಾಗರಾಜ** # 74, ರಂಗರಾವ್ ರಸ್ತೆ, ಬೆಂಗಳೂರು–560004 |
| ಮಾಲೀಕತ್ವ | : | **ಕಾ. ಶ್ರೀ. ನಾಗರಾಜ** # 74, ರಂಗರಾವ್ ರಸ್ತೆ, ಬೆಂಗಳೂರು–560004 |
| ಸಂಪಾದಕ | : | **ಕಾ. ಶ್ರೀ. ನಾಗರಾಜ** # 74, ರಂಗರಾವ್ ರಸ್ತೆ, ಬೆಂಗಳೂರು–560004 |
| ಭಾರತದ ಪ್ರಜೆಯೇ | : | ಹೌದು |
| ಮುದ್ರಕ | : | **ರಾಷ್ಟ್ರೋತ್ಥಾನ ಮುದ್ರಣಾಲಯ** ಕೆಂಪೇಗೌಡನಗರ, ಬೆಂಗಳೂರು–560019 |

ಮೇಲೆ ನೀಡಿರುವ ಎಲ್ಲ ಮಾಹಿತಿಗಳೂ ಪೂರ್ಣ ಸತ್ಯವೆಂದು ನಾನು **ಕಾ. ಶ್ರೀ. ನಾಗರಾಜ,** (#74, ರಂಗರಾವ್ ರಸ್ತೆ, ಬೆಂಗಳೂರು – 560004) ಘೋಷಿಸುತ್ತೇನೆ.

ಸಹಿ

ಬೆಂಗಳೂರು
25.03.2023

**ಕಾ. ಶ್ರೀ. ನಾಗರಾಜ**
(ಪ್ರಕಾಶಕ)


ಪುಸ್ತಕ ಪರಿಚಯ




## 5 ಅಜ್ಞಾತ ನಾಗರಿಕತೆಗಳು

**ಲೇಖಕರು : ರೋಹಿತ್ ಚಕ್ರತೀರ್ಥ**
**ಬೆಲೆ : 200/–**

ಆಫ್ರಿಕದ ಒಲ್‌ಮೆಕ್, ಆಕ್ಸುಮ್, ಅಮೆರಿಕದ ಅನಸಾಝಿ, ಯುರೋಪಿನ ಕಾರ್ಥೇಜ್ ಮತ್ತು ವೈಕಿಂಗ್ – ಈ ಐದು ನಾಗರಿಕತೆಗಳನ್ನು ಈ ಕೃತಿಯು ಸಮಗ್ರವಾಗಿ ಪರಿಚಯಿಸುತ್ತದೆ. ನಾಗರಿಕತೆ ಎಂದಾಗೆಲ್ಲ ನೆನಪಿಗೆ ಬರುವ ಗ್ರೀಕ್, ರೋಮನ್, ಈಜಿಪ್ಟ್, ಬ್ಯಾಬಿಲೋನಿಯನ್ ಮುಂತಾದ ಹೆಸರುಗಳನ್ನು ಹೊರತುಪಡಿಸಿ ಜನಸಾಮಾನ್ಯರಿಗೆ ಗೊತ್ತೇ ಇಲ್ಲದ ನಾಗರಿಕತೆಗಳನ್ನು ಇಲ್ಲಿ ಪರಿಚಯಿಸಲಾಗಿದೆ. ನಾಗರಿಕತೆಗಳನ್ನು ಪರಿಚಯಿಸುವ ಪಠ್ಯಪುಸ್ತಕಗಳ ಸಿದ್ಧಮಾದರಿಯನ್ನು ಕೈಬಿಟ್ಟು ಇಲ್ಲಿ, ಅವನ್ನು ಕತೆಗಳಂತೆ ಹೇಳಲಾಗಿದೆ. ಆ ನಾಗರಿಕತೆಗಳಲ್ಲಿ ಆಳಿದ ರಾಜರ ಕತೆಗಳಲ್ಲದೆ, ಜನಸಾಮಾನ್ಯರ ಬದುಕಿನ ವಿವರಗಳೂ ಇಲ್ಲಿವೆ. ಆ ಜನರ ಧೈರ್ಯಸಾಹಸಗಳು, ಛಲಬಿಡದೆ ಕಾರ್ಯ ಸಾಧಿಸುವ ಗುಣ ಸ್ಫೂರ್ತಿದಾಯಕ.

https://www.ayodhyabooks.com/product/5-ajnatha-nagarikategalu/

ಕವಿತೆ

## ಸೋತು ಗೆದ್ದವರು

ಬಿದ್ದವರ ಎದುರಲ್ಲಿ ಬೀಗಬೇಡಿ
ಎದ್ದು ನಿಲ್ಲುವರವರು ಕಾಲ ಕೂಡಿ
ಮುಂದೆ ನಡೆಯುವುದನ್ನು ನೀವೆ ನೋಡಿ
ಇಂದೇಕೊ ಬಲವಿಲ್ಲ ಕಷ್ಟ ಬಹಳ
ಹೋರಾಡಿ ಸೋತವರು ತೀರ ವಿರಳ
ಸೋಲೆಂದು ಕೊನೆಯಲ್ಲ ನೀತಿ ಸರಳ ॥ 1 ॥

ಗದ್ದುಗೆಯು ಸಿಕ್ಕಿದರೆ ಗರ್ವವೇಕೆ?
ಕುಳಿತವರು ಜಾರಿದರು ಕಾಲಕೆಳಗೆ
ನೆನಪಿಲ್ಲ ಅವರದ್ದು ಇಂದು ಇಳೆಗೆ
ಕಾಣದೆಯೆ ಕುಸಿದವರು ಛಲವ ಹೊತ್ತು
ಕಾಯಕವು ಒಳಿತೆಂದು ಮನವನಿತ್ತು
ನೆನಪಾಗಿ ಉಳಿದಿಹರು ಜಗದೊಳಿಂದು ॥ 2 ॥

ಗೆದ್ದವರ ಕಣ್ಣೆದುರು ದಾರಿಯಿರದೆ
ಮುಂದೇನು ಮಾಡುವುದು ? ಅರಿವ ತರದೆ
ಇದ್ದಲ್ಲೆ ನಿಂತಿರಲು ಮೃತ್ಯು ಬರದೆ ?
ಒಂದೊಂದು ಸೋಲಲ್ಲು ಬಲವು ಹೆಚ್ಚಿ
ಮುಂದಿಹುದು ಬದುಕೆಂದು ಅದನೆ ನೆಚ್ಚಿ
ಬಂದವರ ಕೈಹಿಡಿದ ಅವನೆ ಮೆಚ್ಚಿ ॥ 3 ॥

**– ರಚನೆ: ಡಾ. ರಾಘವೇಂದ್ರ ರಾವ್**

## ಎಲ್ಲೋ ಕೇಳಿದ ಕಥೆ

ದಾನವನ್ನು ಅಹಂಕಾರ ಅರ್ಥಾತ್ 'ನನ್ನ' ತನದಿಂದ ನೀಡಬಾರದು. ಅಹಂಕಾರದಿಂದ ಮಾಡಿರುವ ದಾನಕ್ಕೆ ಯಾವುದೇ ಲಾಭವಿರುವುದಿಲ್ಲ.

ಇದು ಮಹಾಭಾರತ ಕಾಲದ ಕಥೆಯಾಗಿದೆ. ಒಬ್ಬ ಬ್ರಾಹ್ಮಣನು ಭಿಕ್ಷೆಯನ್ನು ಬೇಡಿ ತನ್ನ ಕುಟುಂಬದವರ ಹೊಟ್ಟೆಯನ್ನು ತುಂಬಿಸುತ್ತಿದ್ದನು. ಒಮ್ಮೆ ಆ ಬ್ರಾಹ್ಮಣ ಹಾಗೂ ಅವನ ಕುಟುಂಬದವರು ಊಟವನ್ನು ತಯಾರಿಸುತ್ತಿದ್ದರು. ಅದೇ ಸಮಯದಲ್ಲಿ ಒಬ್ಬ ವೃದ್ಧ ವ್ಯಕ್ತಿ ಅವರ ಮನೆಯ ಬಾಗಿಲಿಗೆ ಬಂದನು. ಅವನು ಹಸಿದಿದ್ದನು ಮತ್ತು ಅವನು ಭಿಕ್ಷೆಯಲ್ಲಿ ಏನಾದರೂ ತಿನ್ನಲು ಕೊಡುವಂತೆ ಕೇಳಿದನು. ಬ್ರಾಹ್ಮಣ ಕುಟುಂಬದವರು ತಮ್ಮ ಸಂಪೂರ್ಣ ಊಟವನ್ನು ಆ ವೃದ್ಧ ಅತಿಥಿಗೆ ಅರ್ಪಿಸಿದರು. ಆ ವೃದ್ಧ ಅತಿಥಿ ಅನ್ನವನ್ನು ಗ್ರಹಣ ಮಾಡಿ ತೃಪ್ತನಾದನು. ತದನಂತರ ಅತಿಥಿಯು ತನ್ನ ಕೈಗಳನ್ನು ತೊಳೆದನು.

ಅದೇ ಸಮಯದಲ್ಲಿ ಅಲ್ಲಿಗೆ ಒಂದು ಮುಂಗುಸಿ ಬಂದಿತು ಮತ್ತು ಎಲ್ಲಿ ಆ ಅತಿಥಿಯು ಕೈತೊಳೆದಿದ್ದನೋ, ಆ ಸ್ಥಾನದಲ್ಲಿ ಬಿದ್ದ ನೀರಿನಲ್ಲಿ ಆ ಮುಂಗುಸಿ ಹೊರಳಾಡತೊಡಗಿತು. ಮುಂಗುಸಿಯ ಅರ್ಧಶರೀರ ಬಂಗಾರದ ಬಣ್ಣದ್ದಾಯಿತು. ಈ ವಿಷಯವು ಅರಣ್ಯದಲ್ಲಿ ಹರಡುವ ಬೆಂಕಿಯಂತೆ ಎಲ್ಲೆಡೆಯೂ ಹಬ್ಬಿತು. ಧರ್ಮರಾಜ ಯುಧಿಷ್ಠಿರನಿಗೂ ಈ ವಿಷಯ ತಲುಪಿತು. ಆಗ ಅವನ ಮನಸ್ಸಿನಲ್ಲಿ 'ನಾನಂತೂ ಲಕ್ಷಾಂತರ ಜನರಿಗೆ ಪ್ರತಿದಿನ ಊಟವನ್ನು ಹಾಕುತ್ತೇನೆ. ಒಂದು ವೇಳೆ ಇಲ್ಲಿಗೆ ಬಂದು ಆ ಮುಂಗುಸಿ ಹೊರಳಾಡಿದರೆ ಅದರ ಉಳಿದರ್ಧ ಭಾಗವೂ ಬಂಗಾರದ ಬಣ್ಣವಾಗುವುದು' ಎಂದು ವಿಚಾರ ಮಾಡಿದರು. ಯುಧಿಷ್ಠಿರನು ಒಂದು ಅನ್ನ ಛತ್ರವನ್ನು ಆಯೋಜಿಸಿದನು. ಅಲ್ಲಿಯೂ ಅದೇ ಮುಂಗುಸಿ ಬಂದಿತು ಮತ್ತು ಅದು ಅದೇ ರೀತಿ ಮಾಡಿತು; ಆದರೆ ಅದರ ಉಳಿದರ್ಧ ಶರೀರ ಮೂಲ ಬಣ್ಣದ್ದಾಗಿಯೇ ಉಳಿಯಿತು. ಧರ್ಮರಾಜನು ಇದರ ಕಾರಣವನ್ನು ಕೇಳಿದಾಗ, ಭಗವಾನ ಶ್ರೀಕೃಷ್ಣನು 'ಹೇ ರಾಜಾ! ನೀನು ಎಷ್ಟು ಜನರಿಗೆ ಭೋಜನವನ್ನು ಬಡಿಸಬಲ್ಲೆ, ಅನ್ನದಾನ ಮಾಡಬಲ್ಲೆ ಎನ್ನುವ ಅಹಂಕಾರ ನಿನಗೆ ಇದೆ. ಈ ಅಹಂಕಾರದ ಕಾರಣವೇ ಈ ಮುಂಗುಸಿಯ ಶರೀರ ಬಂಗಾರದ ಬಣ್ಣಕ್ಕೆ ತಿರುಗಲಿಲ್ಲ. ಆ ಬಡ ಬ್ರಾಹ್ಮಣನ ಕುಟುಂಬದವರು ಮಾತ್ರ ಮನೆಗೆ ಬಂದ ಅತಿಥಿ ಬರಿಹೊಟ್ಟೆಯಲ್ಲಿ ಹಿಂದಿರುಗಿ ಹೋಗಬಾರದು ಎಂದು ತಾವು ಬರಿಹೊಟ್ಟೆಯಲ್ಲಿದ್ದರೂ ಅತಿಥಿಗೆ ಊಟವನ್ನು ಬಡಿಸಿದರು. ಅದರ ಹಿಂದೆ ಯಾವುದೇ ಸ್ವಾರ್ಥ ಅಥವಾ ಅಹಂಕಾರವಿರಲಿಲ್ಲ' ಎಂದು ಹೇಳಿದನು.

**ಸಂಪಾದಕೀಯ ಸಹಕಾರ:** ಶೈಲೇಶ್ ಕುಲಕರ್ಣಿ, ತನ್ಮಯೀ ಪ್ರೇಮಕುಮಾರ್, ಅರುಣ್ ಕಿರಿಮಂಜೇಶ್ವರ, ವಿನಯ್ ಕೃಷ್ಣ

# ‘ಸ್ವ’–ತ್ವದ ಆಧಾರದ ಮೇಲೆ ಭಾರತದ ಪುನರುತ್ಥಾನಕ್ಕೆ ಬದ್ಧರಾಗೋಣ

ವಿಶ್ವ ಕಲ್ಯಾಣಕ್ಕಾಗಿ ಭಾರತದ ‘ಸ್ವ’– ತ್ವದ ಕಡೆಗಿನ ಪಯಣ ಎಂದಿಗೂ ಸ್ಫೂರ್ತಿದಾಯಕ ಎನ್ನುವುದು ಅಖಿಲ ಭಾರತೀಯ ಪ್ರತಿನಿಧಿ ಸಭಾದ ಅಭಿಪ್ರಾಯವಾಗಿದೆ. ವಿದೇಶಿ ಆಕ್ರಮಣ ಮತ್ತು ಹೋರಾಟದ ಸಂದರ್ಭದಲ್ಲಿ ಭಾರತದ ಸಾಮಾಜಿಕ ಜೀವನಕ್ಕೆ ಹಾನಿಯುಂಟಾಗಿದ್ದು, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ವ್ಯವಸ್ಥೆಗಳೂ ಬಹಳ ಆಳವಾಗಿ ವಿರೂಪಗೊಂಡಿತ್ತು. ಇಂತಹ ಕಾಲಘಟ್ಟದಲ್ಲಿ ಅನೇಕ ಸಂತರು, ಮಹಾನ್ ವ್ಯಕ್ತಿತ್ವಗಳ ನೇತೃತ್ವದಲ್ಲಿ, ನಿರಂತರ ಸಂಘರ್ಷದ ನಡುವೆಯೂ ಇಡಿಯ ಸಮಾಜ ತನ್ನ ‘ಸ್ವ’ತ್ವವನ್ನು ಕಾಪಾಡಿಕೊಂಡು ಬಂದಿದೆ. ಇದಕ್ಕೆ ಮೂಲ ಪ್ರೇರಣಾ ಸ್ರೋತ ಸ್ವಧರ್ಮ, ಸ್ವದೇಶೀ ಮತ್ತು ಸ್ವರಾಜ್ಯ ಎಂಬ ‘ಸ್ವ’–ತ್ರಯಗಳು, ಇದರ ಪ್ರಾಪ್ತಿಗೆ ಇಡಿಯ ಸಮಾಜ ಭಾಗಿಯಾಗಿತ್ತು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ದೇಶವು ಇದಕ್ಕಾಗಿ ದುಡಿದ ಸ್ವಾತಂತ್ರ್ಯ ಹೋರಾಟಗಾರರನ್ನು, ಸಂತ ಮಹಂತರನ್ನು, ನಾಯಕರನ್ನು ಗುರುತಿಸಿ ಅವರ ಕೊಡುಗೆಗಳನ್ನು ಸ್ಮರಿಸಿದೆ.

ಸ್ವಾತಂತ್ರ್ಯಾನಂತರ ಅನೇಕ ಕ್ಷೇತ್ರಗಳಲ್ಲಿ ಭಾರತವು ಬಹಳ ಮಹತ್ತರವಾದ ಸಾಧನೆಯನ್ನು ಮಾಡಿದೆ. ಇಂದು ಭಾರತದ ಆರ್ಥಿಕತೆಯು ಜಗತ್ತಿನ ಮುಂದುವರೆಯುತ್ತಿರುವ ಆರ್ಥಿಕ ವ್ಯವಸ್ಥೆಗಳಲ್ಲಿ ಒಂದಾಗಿದೆ. ಜಗತ್ತು ಭಾರತದ ಸನಾತನ ಮೌಲ್ಯಗಳನ್ನು ಒಪ್ಪಿಕೊಂಡಿದೆ. ‘ವಸುಧೈವ ಕುಟುಂಬಕಂ’ನ ಆಧಾರದ ಮೇಲೆ ಭಾರತವು ಜಗತ್ತಿನಲ್ಲಿ ಶಾಂತಿ ಸ್ಥಾಪನೆ, ವೈಶ್ವಿಕ ಸಹೋದರತ್ವ ಮತ್ತು ಮಾನವ ಕಲ್ಯಾಣದ ನಿಟ್ಟಿನಲ್ಲಿ ತನ್ನ ಬಹು ಮುಖ್ಯಭೂಮಿಕೆಯ ಕಡೆಗೆ ಮುಂದುವರೆಯುತ್ತಿದ್ದು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತಿದೆ.

ಸುಸಂಘಟಿತ, ವೈಭವಶಾಲಿ ಮತ್ತು ಸಮೃದ್ಧ ಭಾರತದ ನಿರ್ಮಾಣದ ಪ್ರಕ್ರಿಯೆಗಾಗಿ ನಾವು ಸಮಾಜದ ಎಲ್ಲಾ ವರ್ಗಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವ, ಸರ್ವಾಂಗೀಣ ವಿಕಾಸಕ್ಕೆ ಅವಕಾಶ ನೀಡುವ ಮತ್ತು ಸುಸ್ಥಿರ ಅಭಿವೃದ್ಧಿ ಹಾಗೂ ತಂತ್ರಜ್ಞಾನಗಳು




ಮಿಳಿತಗೊಂಡಂತಹ ಭಾರತೀಯ ಮೌಲ್ಯಾಧಾರಿತ ಹೊಸ ಮಾದರಿಗಳನ್ನು ನಿರ್ಮಿಸುವ ಅಗತ್ಯವಿದೆಯೆಂದು ಅಖಿಲ ಭಾರತೀಯ ಪ್ರತಿನಿಧಿ ಸಭಾ ಅಭಿಪ್ರಾಯ ಪಡುತ್ತದೆ.

ರಾಷ್ಟ್ರದ ಪುನರುತ್ಥಾನಕ್ಕಾಗಿ ಕುಟುಂಬ ವ್ಯವಸ್ಥೆಯ ದೃಢೀಕರಣ,ಬಂಧುತ್ವದ ಮೂಲಕ ಸಾಮಾಜಿಕ ಸಾಮರಸ್ಯ ಮತ್ತು ಸ್ವದೇಶೀ ಭಾವದಲ್ಲಿ ಉದ್ಯಮತೆಯ ಪೋಷಣೆ ಇತ್ಯಾದಿ ಉದ್ದೇಶಗಳನ್ನು ನೆರವೇರಿಸಲು ವಿಶೇಷ ಪ್ರಯತ್ನವನ್ನು ನಡೆಸಬೇಕಿದೆ. ಈ ದೃಷ್ಟಿಯಿಂದ ಸಮಾಜದ ಎಲ್ಲ ಘಟಕಗಳೂ ಸೇರಿ, ಅದರಲ್ಲಿಯೂ ವಿಶೇಷವಾಗಿ ಯುವ ಜನತೆ ಒಗ್ಗಟ್ಟಿನ ಪ್ರಯತ್ನ ನಡೆಸುವ ಅವಶ್ಯಕತೆ ಇದೆ. ಸ್ವಾತಂತ್ರ್ಯ ಸಂಘರ್ಷದ ಕಾಲದಲ್ಲಿ ವಿದೇಶಿಯರ ಶಾಸನದಿಂದ ಮುಕ್ತವಾಗುವುದಕ್ಕಾಗಿ ಯಾವ ರೀತಿಯ ತ್ಯಾಗ ಬಲಿದಾನದ ಅವಶ್ಯಕತೆ ಇತ್ತೋ ಅದೇ ರೀತಿಯಲ್ಲಿ ಇಂದು ದೇಶದ ಪುನರ್ನಿರ್ಮಾಣದಂತಹ ಮಹತ್ತರ ಉದ್ದೇಶವನ್ನು ನೆರವೇರಿಸಲು ಪ್ರತಿಬದ್ಧರಾಗುವ ಮತ್ತು ವಸಾಹತುಶಾಹಿ ಮಾನಸಿಕತೆಯಿಂದ ಮುಕ್ತವಾದ ಸಮಾಜ ಜೀವನವನ್ನು ಕಟ್ಟುವಾಗಲೂ ತ್ಯಾಗ ಬಲಿದಾನಗಳ ಅಗತ್ಯವಿದೆ. ಇದರ ಪರಿಪೇಕ್ಷದಲ್ಲಿ ಪ್ರಧಾನಮಂತ್ರಿಯವರು ಸ್ವಾತಂತ್ರ್ಯ ದಿನದ ಭಾಷಣದಲ್ಲಿ ನೀಡಿದ ಐದು ವಿಚಾರಗಳ ಅನುಷ್ಠಾನವೂ ಅತ್ಯಂತ ಮಹತ್ವಪೂರ್ಣ.

ಜಗತ್ತಿನ ಅನೇಕ ರಾಷ್ಟ್ರಗಳಿಗೆ ಭಾರತದ ಮೇಲೆ ಗೌರವ ಮತ್ತು ಸದ್ಭಾವವಿದೆ,ಆದರೆ, ಭಾರತದ ‘ಸ್ವ’ ಆಧಾರಿತ ಪುನರುತ್ಥಾನವನ್ನು ಜಗತ್ತಿನ ಅನೇಕ ಶಕ್ತಿಗಳಿಗೆ ಸಹಿಸಲು ಸಾಧ್ಯವಾಗುತ್ತಿಲ್ಲ. ಹಿಂದುತ್ವದ ವಿಚಾರವನ್ನು ವಿರೋಧಿಸುವ ದೇಶದ ಒಳಗಿನ ಮತ್ತು ಹೊರಗಿರುವ ಶಕ್ತಿಗಳು ಸ್ವಾರ್ಥ ಮತ್ತು ಭೇದವನ್ನು ಬಿತ್ತುತ್ತಾ ಸಮಾಜದೊಳಗೆ ಪರಸ್ಪರ ಅವಿಶ್ವಾಸ, ವ್ಯವಸ್ಥೆಯ ಮೇಲೆ ಆಕ್ರೋಶ ಮತ್ತು ಅರಾಜಕತೆಯನ್ನು ಸೃಷ್ಟಿಸುವ ಹೊಸ ಷಡ್ಯಂತ್ರಗಳನ್ನು ರೂಪಿಸುತ್ತಿದೆ. ನಾವು ಈ ಕುರಿತಾಗಿ ಬಹಳ ಜಾಗರೂಕತೆಯಿಂದಿದ್ದು ಆ ಎಲ್ಲಾ ಸಮಾಜಘಾತುಕ ವಿಷಯಗಳನ್ನು ವಿಫಲಗೊಳಿಸಬೇಕಿದೆ ಎಂದು ಅಖಿಲ ಭಾರತೀಯ ಪ್ರತಿನಿಧಿ ಸಭಾ ಅಭಿಪ್ರಾಯ ಪಡುತ್ತದೆ.

ಈ ಅಮೃತಕಾಲದಲ್ಲಿ ಭಾರತಕ್ಕೆ ವೈಶ್ವಿಕ ನೇತೃತ್ವವನ್ನು ಪಡೆಯಲು ಸಂಘಟಿತ ಪ್ರಯತ್ನ ಮಾಡಬೇಕಾಗಿದೆ. ಭಾರತೀಯ ಚಿಂತನೆಯ ಬೆಳಕಿನಲ್ಲಿ ಸಾಮಾಜಿಕ,ಶೈಕ್ಷಣಿಕ, ಆರ್ಥಿಕ, ಪ್ರಜಾತಾಂತ್ರಿಕ ನ್ಯಾಯಾಂಗ ಸಂಸ್ಥೆಗಳ ಸಹಿತ ಸಮಾಜಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಯುಗಾನುಕೂಲ ಮಾದರಿಗಳನ್ನು ವಿಕಸಿತಗೊಳಿಸುವ ಕಾರ್ಯದಲ್ಲಿ ಸಂಪೂರ್ಣ ಸಾಮರ್ಥ್ಯವನ್ನು ಪ್ರಕಟಗೊಳಿಸುತ್ತಾ ಸಹಭಾಗಿಗಳಾಗುವಂತೆ, ಇದರಿಂದ ಭಾರತವು ವೈಶ್ವಿಕವಾಗಿ ಸಮರ್ಥ, ವೈಭವಶಾಲಿ ಮತ್ತು ವಿಶ್ವ ಕಲ್ಯಾಣಕಾರಿ ರಾಷ್ಟ್ರದ ರೂಪದಲ್ಲಿ ಮುಖ್ಯವಾದ ಸ್ಥಾನವನ್ನು ಪಡೆಯುವಂತಾಗಬೇಕಿದೆ. ಈ ನಿಟ್ಟಿನಲ್ಲಿ ಪ್ರಜ್ಞಾವಂತ ಸಮುದಾಯ ಸೇರಿದಂತೆ ಸಂಪೂರ್ಣ ಸಮಾಜವು ಕಟಿಬದ್ಧರಾಗಲು ಅಖಿಲ ಭಾರತೀಯ ಪ್ರತಿನಿಧಿ ಸಭಾ ಕರೆ ನೀಡುತ್ತದೆ.

# ಸರಕಾರ್ಯವಾಹ ಶ್ರೀ ದತ್ತಾತ್ರೇಯ ಹೊಸಬಾಳೆಯವರ ಹೇಳಿಕೆಗಳು

## ಹೇಳಿಕೆ –1




**ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕದ 350 ವರ್ಷಗಳ ಸಂದರ್ಭದಲ್ಲಿ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆಯವರ ಹೇಳಿಕೆ.**

ಛತ್ರಪತಿ ಶಿವಾಜಿ ಮಹಾರಾಜರು ಭಾರತದ ಸಮಾಜದಲ್ಲಿದ್ದ ನೂರಾರು ವರ್ಷಗಳ ದಾಸ್ಯದ ಮಾನಸಿಕತೆಯಿಂದ ಮುಕ್ತಗೊಳಿಸಿ ಸಮಾಜದಲ್ಲಿ ಆತ್ಮವಿಶ್ವಾಸ ಮತ್ತು ಆತ್ಮಗೌರವದ ಭಾವವನ್ನು ಜಾಗೃತಗೊಳಿಸಿದ ವ್ಯಕ್ತಿಗಳಲ್ಲಿ ಒಬ್ಬರು. ಜ್ಯೇಷ್ಠ ಶುಕ್ಲ ತ್ರಯೋದಶಿಯಂದು ಅವರ ರಾಜ್ಯಾಭಿಷೇಕಗೊಂಡು, ಹಿಂದವಿ ಸ್ವರಾಜ್ಯವು ಸ್ಥಾಪನೆಗೊಂಡಿತು. ಈ ವರ್ಷ ಹಿಂದವಿ ಸ್ವರಾಜ್ಯದ ಸ್ಥಾಪನೆಯಾಗಿ 350 ವರ್ಷಗಳಾಗಲಿದೆ. ಮಹಾರಾಷ್ಟ್ರವನ್ನೂ ಸೇರಿಸಿಕೊಂಡಂತೆ ದೇಶಾದ್ಯಂತ ಈ ನಿಮಿತ್ಯ ಅನೇಕಾನೇಕ ಕಾರ್ಯಕ್ರಮಗಳು ಆಯೋಜನೆಗೊಳ್ಳಲಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಈ ಪಾವನ ಸಂದರ್ಭದಲ್ಲಿ ಛತ್ರಪತಿ ಮಹಾರಾಜರ ಪುಣ್ಯಸ್ಮರಣೆ ಮಾಡುತ್ತಾ ಸ್ವಯಂಸೇವಕರು ಮತ್ತು ಸಮಾಜದ ವಿವಿಧ ಘಟಕಗಳಿಗೆ ಆಯೋಜಿತ ಕಾರ್ಯಕ್ರಮದಲ್ಲಿ ಭಾಗಿಯಾಗಿ ಹಿಂದವಿ ಸ್ವರಾಜ್ಯದ ಸ್ಥಾಪನೆಯಂತಹ ಯುಗಪ್ರವರ್ತಕ ಘಟನೆಯನ್ನು ಪುನಃಸ್ಮರಣೆ ಮಾಡಲು ಕರೆ ನೀಡುತ್ತದೆ.

ಛತ್ರಪತಿ ಶಿವಾಜಿ ಮಹಾರಾಜರ ಜೀವನ ಅದ್ವಿತೀಯ ಪರಾಕ್ರಮ ರಣನೀತಿ ಕುಶಲತರ, ಯುದ್ಧಶಾಸ್ತ್ರದ ಮರ್ಮಜ್ಞತೆ, ಸಂವೇದನಾಶೀಲ, ನ್ಯಾಯಪೂರ್ಣ ಮತ್ತು ಪಕ್ಷಪಾತರಹಿತ ಪ್ರಶಾಸನ, ಮಹಿಳೆಯರ ಸಮ್ಮಾನ, ಹಿಂದುತ್ವದ ಕುರಿತಾದ ಪ್ರಖರತೆಗಳಂತಹ ಅನೇಕ ವಿಶೇಷತೆಗಳಿಂದ ಕೂಡಿದೆ. ವಿಪರೀತದ ವಿಷಮ ಪರಿಸ್ಥಿತಿಯನ್ನು ಎದುರಿಸುತ್ತಲೂ ಅವರು ಧ್ಯೇಯ ಮತ್ತು ಈಶ್ವರನ ಕುರಿತಾದ ಶ್ರದ್ಧೆ ಮತ್ತು ವಿಶ್ವಾಸ, ತಂದೆ, ತಾಯಿ ಮತ್ತು ಗುರುಹಿರಿಯರ ಗೌರವ, ತಮ್ಮ ಜೊತೆಗಾರರ ಸುಖದುಃಖಗಳಿಗೆ ಹೆಗಲಾಗುವುದು, ಸಮಾಜದ ಎಲ್ಲಾ ವರ್ಗಗಳನ್ನು ಒಟ್ಟುಗೂಡಿಸಿಕೊಂಡು ನಡೆಯುವುದು ಹೀಗೆ ಅನೇಕ ಉದಾಹರಣೆಗಳನ್ನು ನಾವು ಅವರ ಜೀವನದಲ್ಲಿ ಕಾಣಬಹುದು. ಬಾಲ್ಯದಿಂದಲೂ ತಮ್ಮ ವ್ಯಕ್ತಿತ್ವದ ಮೂಲಕ ತಮ್ಮ ಜೊತೆಗಾರರಲ್ಲಿ ಸ್ವರಾಜ್ಯದ ಸ್ಥಾಪನೆಗಾಗಿ ಪ್ರಾಣವನ್ನೇ ಪಣವಾಗಿಡುವ ಪ್ರೇರಣೆಯನ್ನು ಜಾಗೃತಗೊಳಿಸಿದರು. ಅವರು ಮುಂದುವರೆದು ಭಾರತದ ಅನ್ಯಾನ್ಯ ಪ್ರದೇಶದಲ್ಲಿ ದೇಶಭಕ್ತರಿಗೆ ಪ್ರೇರಣೆ ನೀಡಿದರು. ಅವರ ದೇಹಾಂತ್ಯದ ನಂತರವೂ ಸಮಾಜದಲ್ಲಿ ದಶಕಗಳ ಕಾಲ ಆಕ್ರಮಣಗಳನ್ನು ಹತ್ತಿಕ್ಕುವ ಚೈತನ್ಯ ಜಾಗೃತವಾಗಿತ್ತು, ಇದು ಇತಿಹಾಸದಲ್ಲಿ ಅಪರೂಪದ ಉದಾಹರಣೆಯಾಗಿದೆ.

ಛತ್ರಪತಿ ಶಿವಾಜಿ ಮಹಾರಾಜರು ಬಾಲ್ಯದಲ್ಲೇ ಸ್ವರಾಜ್ಯ ಸ್ಥಾಪನೆಯ ಸಂಕಲ್ಪದ ಉದ್ದೇಶ ಕೇವಲ ಸಾಮ್ರಾಜ್ಯ ಸ್ಥಾಪನೆ ಮಾತ್ರವಾಗಿರಲಿಲ್ಲ ಬದಲಾಗಿ ಧರ್ಮ, ಸಂಸ್ಕೃತಿಯ ರಕ್ಷಣೆ ಮಾಡುತ್ತಾ ‘ಸ್ವ’ಆಧಾರಿತ ರಾಜ್ಯದ ಸ್ಥಾಪನೆ ಮಾಡುವುದಾಗಿತ್ತು. ಅವರ ಅಧಿಷ್ಠಾನವು ‘ಈ ಸ್ವರಾಜ್ಯದ ಸ್ಥಾಪನೆ ಶ್ರೀಯ ಇಚ್ಛೆ’ ಎನ್ನುವ ಭಾವದಿಂದ ಕೂಡಿತ್ತು. ಸ್ವರಾಜ್ಯ ಸ್ಥಾಪನೆಯ ಸಮಯದಲ್ಲಿ ಅಷ್ಟ ಪ್ರಧಾನ ಮಂಡಲದ ರಚನೆ, ‘ರಾಜ್ಯ ವ್ಯವಹಾರ ಕೋಶ’ದ ನಿರ್ಮಾಣ ಮತ್ತು ಸ್ವಭಾಷೆಯ ಉಪಯೋಗ, ಕಾಲಗಣನೆಯ ನಿಟ್ಟಿನಲ್ಲಿ ಶಿವ ಶಕೆಯ ಆರಂಭ, ಸಂಸ್ಕೃತದ ರಾಜಮುದ್ರೆಯ ಉಪಯೋಗ ಇತ್ಯಾದಿ ಕಾರ್ಯಕಲಾಪ ಧರ್ಮಸ್ಥಾಪನೆಯ ಉದ್ದೇಶದಿಂದ ಸ್ಥಾಪಿತ ಸ್ವರಾಜ್ಯಕ್ಕೆ ಸ್ಥಾಯಿತ್ವ ನೀಡುವಲ್ಲಿ ದಾರಿ ತೋರಿಸಿತು.

ಇಂದು ಭಾರತವು ತನ್ನದೇ ಅದ ಸಮಾಜಶಕ್ತಿಯನ್ನು ಜಾಗೃತಗೊಳಿಸುತ್ತಾ ‘ಸ್ವ’ ಆಧಾರಿತ ರಾಷ್ಟ್ರ ನಿರ್ಮಾಣದ ದಾರಿಯಲ್ಲಿ ಮುನ್ನಡೆಯುತ್ತಿದೆ. ಭಾರತದ ಸ್ವ ಆಧಾರಿತ ರಾಜ್ಯದ ಸ್ಥಾಪನೆಯ ಉದ್ದೇಶದಿಂದ ಘಟಿಸಿದ ಛತ್ರಪತಿ ಶಿವಾಜಿ ಮಹಾರಾಜರ ಜೀವನಯಾತ್ರೆಯ ಸ್ಮರಣೆ ಅತ್ಯಂತ ಪ್ರಾಸಂಗಿಕ ಹಾಗೂ ಪ್ರೇರಣಾದಾಯಕವಾಗಿದೆ.



## ಹೇಳಿಕೆ –2

**ಭಗವಾನ್ ಮಹಾವೀರ ಸ್ವಾಮಿಗಳ 2550ನೇ ನಿರ್ವಾಣದ ಸಂದರ್ಭದಲ್ಲಿ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆಯವರ ಹೇಳಿಕೆ.**

ಭಗವಾನ್ ಮಹಾವೀರರ ನಿರ್ವಾಣ ಪ್ರಾಪ್ತಿಯ 2550 ವರ್ಷಗಳು ಪೂರ್ಣಗೊಳ್ಳುತ್ತಿವೆ. ಕಾರ್ತಿಕ ಅಮಾವಾಸ್ಯೆಯ ದಿನದಂದು ಎಂಟು ಕರ್ಮಗಳನ್ನು ಜಯಿಸಿ ಅವರು ನಿರ್ವಾಣವನ್ನು ಪಡೆದರು. ಮನುಕುಲವನ್ನು ಜ್ಞಾನದ ಬೆಳಕಿನೆಡೆಗೆ ಕರೆದೊಯ್ದ ದೈವಿಕ ಅಭಿವ್ಯಕ್ತಿಯಾಗಿದ್ದರು. ತಮ್ಮ ಜೀವನವನ್ನು ಸ್ವ–ಅಭಿವೃದ್ಧಿ ಮತ್ತು ಸಾಮಾಜಿಕ ಕಲ್ಯಾಣಕ್ಕಾಗಿ ಮೀಸಲಿಡುವ ಜೊತೆಗೆ ಮಾನವೀಯತೆಗೆ ಅತ್ಯುನ್ನತ ಸೇವೆಯನ್ನು ಸಲ್ಲಿಸಿದರು. ಮಾನವೀಯತೆಯ ಕಲ್ಯಾಣವನ್ನು ಮನಸ್ಸಿನಲ್ಲಿಟ್ಟುಕೊಂಡು ಸಾರ್ವಕಾಲಿಕ ಪ್ರಸ್ತುತವಾದ ಸತ್ಯ, ಅಹಿಂಸೆ, ಅಸ್ತೇಯ (ಕಳ್ಳತನ ಮಾಡದಿರುವುದು), ಅಪರಿಗ್ರಹ (ಆಸೆಗಳ ನಿಗ್ರಹ) ಮತ್ತು ಬ್ರಹ್ಮಚರ್ಯ ಎಂಬ ಐದು ಶಾಶ್ವತವಾದ ತತ್ವಗಳನ್ನು ನೀಡಿದರು. ಮಹಿಳೆಯರು ಸಮಾಜಕ್ಕೆ ನೀಡುವ ಕೊಡುಗೆಗಳನ್ನು ಗೌರವಿಸುವ ಮತ್ತು ಗುರುತಿಸುವ ಮೂಲಕ ಕಳೆದುಹೋದ ಅವರ ಘನತೆಯನ್ನು ಮರುಸ್ಥಾಪಿಸಿ ಸಮಾಜದಲ್ಲಿನ ಲಿಂಗ ತಾರತಮ್ಯವನ್ನು ನಿರ್ಮೂಲನೆ ಮಾಡುವ ಹೋರಾಟದಲ್ಲಿ ಭಗವಾನ್ ಮಹಾವೀರರು ಪ್ರಮುಖರು.

ಅವರ ಅಪರಿಗ್ರಹ (ಆಸೆಗಳ ನಿಗ್ರಹ) ಬೋಧನೆಯು ಜನರು ತಮ್ಮ ಭೌತಿಕ ಆಸೆಗಳನ್ನು ನಿಗ್ರಹಿಸಿ ತಮ್ಮ ಹೆಚ್ಚುವರಿ ಸಂಪತ್ತನ್ನು ಸಮಾಜದ ಸುಧಾರಣೆಗೆ ಬಳಸುವುದಕ್ಕೆ ಪ್ರೋತ್ಸಾಹಿಸಿತು. ಈಗ ನಮ್ಮ ಭೋಗಪ್ರಧಾನ ಜೀವನಶೈಲಿಯಿಂದಾಗಿ ಹಾಳಾಗುತ್ತಿರುವ ಸುತ್ತಲಿನ ಪರಿಸರವನ್ನು ಉಳಿಸಬೇಕಾದರೆ ಅಪರಿಗ್ರಹದ ಪರಿಕಲ್ಪನೆಯನ್ನು ಹಿಂದೆಂದಿಗಿಂತಲೂ ಹೆಚ್ಚಾಗಿ ಅಭ್ಯಾಸ ಮಾಡಬೇಕು. ಅವರ ಅಹಿಂಸೆ, ಸಹ–ಅಸ್ತಿತ್ವ ಮತ್ತು ಪ್ರತಿಯೊಂದು ಜೀವಿಯಲ್ಲೂ ತನ್ನನ್ನೇ ಕಾಣುವ ಬೋಧನೆಗಳಿಗೆ ಬದ್ಧವಾಗಿರುವುದು ಪ್ರಪಂಚದ ಅಸ್ತಿತ್ವಕ್ಕೆ ಅವಶ್ಯಕವಾಗಿದೆ. ಭಗವಾನ್ ಮಹಾವೀರರು ಪ್ರತಿಯೊಬ್ಬರ ಸಂತೋಷಕ್ಕೆ ಅವರವರ ಸ್ವಂತ ಕಾರ್ಯಗಳು ಜವಾಬ್ದಾರಿಯಾಗಿರುತ್ತದೆ ಮತ್ತು ಒಬ್ಬರ ಕಷ್ಟ ನಷ್ಟಗಳಿಗೆ ಇತರರನ್ನು ಹೊಣೆಗಾರರನ್ನಾಗಿ ಮಾಡುವುದನ್ನು ತಪ್ಪಿಸಬೇಕು ಎಂಬ ಅಭಿಪ್ರಾಯವನ್ನು ಹೊಂದಿದ್ದರು.

ಇಂದು ಭಾರತವು ತನ್ನ ‘ಸ್ವ’ದ ಆಧಾರದ ಮೇಲೆ ‘ವಿಶ್ವಗುರು’ವಾಗುವ ದಿಕ್ಕಿನಲ್ಲಿ ಸಾಗುತ್ತಿದೆ; ಭಾರತದ ಆಂತರಿಕ ಸಾಮರ್ಥ್ಯವು ಜಗತ್ತನ್ನು ಮುನ್ನಡೆಸಲು ಪ್ರೇರೇಪಿಸುತ್ತಿದೆ. ಈ ಸಮಕಾಲೀನ ಯುಗದ ಹಾದಿಯಲ್ಲಿ ಮುಂದುವರಿಯಲು ವರ್ಧಮಾನನ ಬುದ್ಧಿವಂತಿಕೆಯ ಅಗತ್ಯವಿದೆ ಎಂಬುದು ರಾಷ್ಟ್ರೀಯ ಸ್ವಯಂಸೇವಕ ಸಂಘದ ನಂಬಿಕೆ. ಭಗವಾನ್ ಮಹಾವೀರರ ನಿರ್ವಾಣ ಪ್ರಾಪ್ತಿಯ 2550ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘವು ಅವರಿಗೆ ಗೌರವಪೂರ್ವಕವಾಗಿ ನಮನಗಳನ್ನು ಸಲ್ಲಿಸುತ್ತದೆ. ಎಲ್ಲಾ ಸ್ವಯಂಸೇವಕರು ಈ ನಿಟ್ಟಿನಲ್ಲಿ ಆಯೋಜಿಸಲಾದ ಕಾರ್ಯಕ್ರಮಗಳಲ್ಲಿ ಪೂರ್ಣ ಹೃದಯದಿಂದ ಕೊಡುಗೆ ನೀಡುತ್ತಾರೆ ಮತ್ತು ಅವರ ಉಪದೇಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆ. ಸಮಾಜವು ಭಗವಾನ್ ಮಹಾವೀರರ ಬೋಧನೆಗಳನ್ನು ಅಳವಡಿಸಿಕೊಳ್ಳುತ್ತದೆ ಮತ್ತು ಮಾನವತೆಯ ಕಲ್ಯಾಣಕ್ಕಾಗಿ ತಾನು ಬದ್ಧವಾಗಿರುತ್ತದೆ ಎಂದು ಸಂಘ ಆಶಿಸುತ್ತದೆ.

*4ನೇ ಪುಟಕ್ಕೆ...*

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th MARCH 2023
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 01-04-2023



# ಸರಕಾರ್ಯವಾಹರ ಪತ್ರಿಕಾಗೋಷ್ಠಿಯ ಸಾರಾಂಶ

**ಪಾಣಿಪತ್:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂರು ದಿನಗಳ ಅಖಿಲ ಭಾರತೀಯ ಪ್ರತಿನಿಧಿ ಸಭಾ ಮಾರ್ಚ್ 12 ರಿಂದ 14ರವರೆಗೆ ನಡೆಯಿತು. ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಅಂತಿಮ ದಿನವಾದ ಇಂದು ಪತ್ರಿಕಾಗೋಷ್ಠಿ ನಡೆಸಿದರು. ಇಂದು ನಿಧನರಾದ ಖ್ಯಾತ ಪತ್ರಕರ್ತ ಡಾ. ವೇದ್ ಪ್ರತಾಪ್ ವೈದಿಕ್ ಅವರಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪರವಾಗಿ ಶ್ರದ್ಧಾಂಜಲಿ ಸಲ್ಲಿಸಿದರು.

ಅಖಿಲ ಭಾರತೀಯ ಪ್ರತಿನಿಧಿ ಸಭಾದ ಬೈಠಕ್‌ನಲ್ಲಿ ವಾರ್ಷಿಕ ವರದಿಯ ಸಹಿತ ಭವಿಷ್ಯದ ಕಾರ್ಯ ದೃಷ್ಟಿಯ ಕುರಿತು ಮಹತ್ವದ ನಿರ್ಣಯಗಳನ್ನು ಅಂಗೀಕರಿಸಲಾಗಿದೆ. ಈ ನಿರ್ಣಯಗಳ ಪ್ರಸ್ತಾವನೆಯು ಭಾರತದ ಅಮೃತ ಕಾಲ, ಸಂಘದ ಶತಾಬ್ದಿ ವರ್ಷಾಚರಣೆಯ ಸಮಯದಲ್ಲಿ ಸಮಾಜಕ್ಕೆ ಹೊಸ ದಿಕ್ಕನ್ನು ತೋರಿಸುವ ಕೆಲಸ ಮಾಡುತ್ತದೆ. ಜಾಗತಿಕ ನಾಯಕತ್ವದ ಹಾದಿಯಲ್ಲಿ ಭಾರತವು ಸ್ಥಿರವಾದ ದಾಪುಗಾಲು ಇಡುತ್ತಿರುವ ಈ ಸಮಯದಲ್ಲಿ, ಈ ಹಾದಿಯಲ್ಲಿ ಯಾರು ಮುಳ್ಳುಗಳನ್ನು ಹಾಕಲು ಬಯಸುತ್ತಾರೆ ಎಂಬುದನ್ನು ನಾಗರಿಕರು ಅರ್ಥಮಾಡಿಕೊಳ್ಳಬೇಕು. ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಇಡೀ ಸಮಾಜವು ರಾಷ್ಟ್ರದ ನವೋತ್ಥಾನದ ಹಾದಿಯಲ್ಲಿ ಬರುವ ಎಲ್ಲಾ ಅಡೆತಡೆಗಳನ್ನು ನಿವಾರಿಸುವ ಕೆಲಸ ಮಾಡುತ್ತದೆ ಎಂದರು.

ದೇಶದ ಅಮೃತಕಾಲದಲ್ಲಿ ಭಾರತದ ಆಖ್ಯಾನ ಬದಲಾಗಬೇಕು. ಭಾರತದ ಪ್ರಶ್ನೆಗಳಿಗೆ ಭಾರತದಿಂದಲೇ ಉತ್ತರ ಸಿಗಬೇಕು. ತಿರುಚಿದ ಇತಿಹಾಸದ ಜಾಗದಲ್ಲಿ ಸರಿಯಾದ ಇತಿಹಾಸವನ್ನು ಹೇಳಬೇಕು ಮತ್ತು ಯುಗಾನುಕೂಲಕ್ಕೆ ತಕ್ಕಂತೆ ಸಮಕಾಲೀನ ಪರಿಹಾರಗಳನ್ನು ರಚಿಸಬೇಕಿದೆ.

ಸಭೆಯಲ್ಲಿ ನಿರ್ಣಯದ ಹೊರತಾಗಿ, ಮಹರ್ಷಿ ದಯಾನಂದ ಸರಸ್ವತಿ ಅವರ 200ನೇ ಜನ್ಮ ವರ್ಷಾಚರಣೆ, ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕದ 350ನೇ ವರ್ಷ ಮತ್ತು ಮಹಾವೀರ ಸ್ವಾಮಿಗಳ 2550ನೇ ವರ್ಷದ ನಿರ್ವಾಣದ ಕುರಿತಾದ ಮೂರು ಹೇಳಿಕೆಗಳನ್ನು ಸಹ ನೀಡಲಾಯಿತು.


ಸರಕಾರ್ಯವಾಹರು ಮಾತನಾಡುತ್ತಾ 2025ರ ವಿಜಯದಶಮಿಯಿಂದ ಸಂಘದ ಶತಾಬ್ದಿ ವರ್ಷ ಆರಂಭವಾಗುತ್ತದೆ. ಆದರೆ ಪ್ರತಿನಿಧಿ ಸಭಾದಲ್ಲಿ ಈ ಕುರಿತಂತೆ ಯಾವುದೇ ಯೋಜನೆ




ನಡೆದಿಲ್ಲ. ಆದರೆ ಕಾರ್ಯವಿಸ್ತಾರ ಮತ್ತು ಗುಣಾತ್ಮಕವಾಗಿ ಹೇಗೆ ವಿಸ್ತರಣೆಯಾಗಬೇಕು ಎಂಬುದರ ಬಗ್ಗೆ ಚರ್ಚೆ ನಡೆಯಿತು ಎಂದರು. ಆಯಾ ಸ್ಥಾನಗಳಲ್ಲಿ ಗ್ರಾಮ ಬಸ್ತಿಗಳಲ್ಲಿ ಅಲ್ಲಿನ ಪರಿಸ್ಥಿತಿಯ ಅಧ್ಯಯನ ನಡೆಸಿ ಅಲ್ಲಿನ ಸಮಸ್ಯೆಗಳಿಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ಶಾಖೆಯ ಸ್ವಯಂಸೇವಕರು ನಿರತರಾಗುತ್ತಾ ಸಮಾಜವನ್ನು ಜೋಡಿಸುವ ಪ್ರಯತ್ನ ನಡೆಸುತ್ತಾರೆ. ಈ ರೀತಿಯ ಪ್ರಯೋಗ ಈಗಲೂ ನಡೆಯುತ್ತಿದೆ. ಈ ಕುರಿತಾಗಿಯೂ ಪ್ರತಿನಿಧಿ ಸಭಾದಲ್ಲಿ ಚರ್ಚೆ ನಡೆಯಿತು. ದತ್ತಾತ್ರೇಯ ಹೊಸಬಾಳೆಯವರು ಮಹತ್ವಪೂರ್ಣ ವಿಚಾರಗಳ ಕುರಿತು ಮಾತನಾಡುತ್ತಾ, ಸಾಮಾಜಿಕ ಸಾಮರಸ್ಯ, ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸ್ವದೇಶೀ ಆಚರಣೆ, ನಾಗರಿಕ ಕರ್ತವ್ಯಗಳು ಎಂಬ ಈ ಐದು ಕಾರ್ಯಗಳ ಕಡೆಗೆ ಮುಂದಿನ ದಿನಗಳಲ್ಲಿ ಗಮನ ಹರಿಸಿ ಸಾಮಾಜಿಕ ಪರಿವರ್ತನೆ ನಡೆಸುವ ಕುರಿತು ಪ್ರಯತ್ನ ನಡೆಸಲಿದ್ದೇವೆ ಎಂದರು. ಇದರ ಜೊತೆಗೆ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು ಅಸ್ಪೃಶ್ಯತೆ ಸಮಾಜಕ್ಕೆ ಶಾಪ ಮತ್ತು ಕಳಂಕವಾಗಿದೆ. ಸಂಘ ಅದನ್ನು ತೊಲಗಿಸಲು ಬದ್ಧವಾಗಿದೆ ಎಂದರು.

ಮುಂದುವರೆದು ಪತ್ರಕರ್ತರ ಪ್ರಶ್ನೆಗೆ ಉತ್ತರ ನೀಡುತ್ತಾ ಸಂಘವು ಜನಸಂಖ್ಯಾ ಅಸಮತೋಲನದ ಕುರಿತಾಗಿ ಅತ್ಯಂತ ಗಂಭೀರವಾಗಿ ಚಿಂತನೆ ನಡೆಸಿದೆ. ಈ ವಿಷಯವಾಗಿ ಆಗಾಗ ಸರ್ವೋಚ್ಚ ನ್ಯಾಯಾಲಯ, ನಿವೃತ್ತ ಚುನಾವಣಾ ಆಯುಕ್ತ ಟಿ.ಎನ್. ಶೇಷನ್ ಹಾಗೂ ಮಹಾತ್ಮ ಗಾಂಧಿಯವರೂ ಕೂಡ ಎಚ್ಚರಿಕೆಯ ಮಾತುಗಳನ್ನಾಡಿದ್ದರು ಎಂದರು. ರಾಹುಲ್ ಗಾಂಧಿಯವರು ಸಂಘದ ಕುರಿತು, ಭಾರತದ ಕುರಿತು ಅಪಶಬ್ದಗಳಿಂದ ನಿಂದಿಸಿದ್ದಾರೆ. ಇದರ ಕುರಿತು ನಿಮ್ಮ ಅಭಿಪ್ರಾಯ ಏನು ಎಂದಾಗ ನಾವು ಈ ಕುರಿತು ಮಾತನಾಡುವ ಅವಶ್ಯಕತೆ ಇಲ್ಲ. ಅವರು ರಾಜಕೀಯ ಅಜೆಂಡಾವನ್ನಿಟ್ಟುಕೊಂಡು ಮಾತನಾಡುತ್ತಾರೆ. ಒಂದು ರಾಜಕೀಯ ಪಕ್ಷದ ನೇತಾರರಾಗಿ ಜವಾಬ್ದಾರಿಯಿಂದ ಮಾತನಾಡಬೇಕು ಎಂದರು. ಸಲಿಂಗ ವಿವಾಹದ ವಿಚಾರವಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು marriages can take place only between two opposite genders, ವಿವಾಹ ಒಂದು ಸಂಸ್ಕಾರ, ಅದು ಒಪ್ಪಂದವಲ್ಲ, ವಿವಾಹದ ಉದ್ದೇಶ ಕೇವಲ ವ್ಯಕ್ತಿಗತ ಸುಖವಲ್ಲ, ಬದಲಾಗಿ ಇಡಿಯ ಸಮಾಜದ ಹಿತವೇ ಆಗಿದೆ ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹರು ಮಾತನಾಡುತ್ತಾ ಭಾರತವು ವೇಗವಾಗಿ ಆರ್ಥಿಕ ವಿಕಾಸ ಕಾಣುತ್ತಿದೆ. ಸಾಮರಿಕ ಮತ್ತು ಕೂಟನೀತಿಯಲ್ಲೂ ಹೆಚ್ಚುತ್ತಿರುವ ಭಾರತದ ವರ್ಚಸ್ಸು ನಮಗೆಲ್ಲ ಪರಿಚಯವಿದೆ. ಈ ಸಂದರ್ಭದಲ್ಲಿ ಭಾರತೀಯ ಸಮಾಜ ಒಂದಾಗಿ ಸರ್ವಾಂಗೀಣ ವಿಕಾಸದ ಕಡೆಗೆ ಗಮನ ಹರಿಸಿ, ಆ ನಿಟ್ಟಿನಲ್ಲಿ ಕೆಲಸ ಮಾಡಬೇಕಿದೆ. ಅನೇಕ ಶಕ್ತಿಗಳು ಭಾರತವನ್ನು ಈ ದಾರಿಯಲ್ಲಿ ಸಾಗುವುದರಿಂದ ತಪ್ಪಿಸಲು ಕಾದುಕುಳಿತಿವೆ. ಆದರೆ 'ಸ್ವ'–ತ್ವವನ್ನು ಮೈಗೂಡಿಸಿಕೊಂಡು ಇಂತಹ ಶಕ್ತಿಗಳನ್ನು ಸೋಲಿಸಬೇಕಾದ ಅಗತ್ಯವಿದೆ. ಅಖಿಲ ಭಾರತ ಪ್ರಚಾರ ಪ್ರಮುಖ್ ಸುನಿಲ್ ಅಂಬೇಕರ್ ಪತ್ರಿಕಾ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.




3ನೇ ಪುಟದಿಂದ...

# ಸರಕಾರ್ಯವಾಹ ಶ್ರೀ ದತ್ತಾತ್ರೇಯ ಹೊಸಬಾಳೆಯವರ ಹೇಳಿಕೆಗಳು

## ಹೇಳಿಕೆ – 3

**ದಯಾನಂದ ಸರಸ್ವತಿ ಅವರ 200ನೇ ವರ್ಷದ ಜಯಂತಿಯ ಸಂದರ್ಭದಲ್ಲಿ ಸರಕಾರ್ಯವಾಹ ದತ್ತಾತ್ರೇಯವರ ಹೊಸಬಾಳೆ ಹೇಳಿಕೆ.**

ಪರಾತಂತ್ರದ ಕಾಲದಲ್ಲಿ ದೇಶ ತನ್ನ ಸಾಂಸ್ಕೃತಿಕ ಮತ್ತು ಆಧ್ಯಾತ್ಮದ ನೆಲೆಯಲ್ಲಿ ದಿಗ್ಭ್ರಮೆಗೊಂಡು ನಿರಾಶೆಯ ಕೂಪದಲ್ಲಿರುವಾಗ ಮಹರ್ಷಿ ದಯಾನಂದ ಸರಸ್ವತಿ ಅವರು ಮುನ್ನೆಲೆಗೆ ಬಂದರು. ಅಂತಹ ಅನಾನುಕೂಲ ವಾತಾವರಣದಲ್ಲಿ ರಾಷ್ಟ್ರದ ಆಧ್ಯಾತ್ಮಿಕ ಸೆಲೆಯನ್ನು ಸದೃಢಗೊಳಿಸುವುದಷ್ಟೇ ಅಲ್ಲದೆ 'ವೇದಗಳಿಗೆ ಹಿಂತಿರುಗು'ವ ಉದ್ಬೋಧವನ್ನು ಜಡವಾಗಿದ್ದ ಸಮಾಜಕ್ಕೆ ನೀಡುತ್ತಾ ತನ್ನ ಮೂಲಸೆಲೆಯ ಜೊತೆಗೆ ಜೋಡಿಸುವ ಅದ್ಭುತ ಕಾರ್ಯ ಮಾಡಿದರು. ಸಮಾಜಕ್ಕೆ ಚೈತನ್ಯವನ್ನೂ, ಬಲವನ್ನೂ ನೀಡುವ ಜೊತೆಗೆ ಕಾಲದ ಪ್ರವಾಹದಲ್ಲಿ ಸಮಾಜದೊಳಗೆ ಸೇರಿಕೊಂಡಿದ್ದ ಕಟ್ಟುಪಾಟುಗಳನ್ನು ದೂರಗೊಳಿಸುವ ಮಹಾಪುರುಷರ ಶೃಂಖಲೆಯಲ್ಲಿ ಮಹರ್ಷಿ ದಯಾನಂದ ಸರಸ್ವತಿಯವರು ದೇದೀಪ್ಯಮಾನ ನಕ್ಷತ್ರವಾಗಿದ್ದಾರೆ. ಅವರು ಪ್ರಭೆ ಮತ್ತು ಪ್ರೇರಣೆಯಲ್ಲಿ ನಡೆದ ಸಾಂಸ್ಕೃತಿಕ ಕ್ರಾಂತಿಯ ಪರಿಣಾಮವನ್ನು ನಾವು ಇಂದು ಕಾಣುತ್ತಿದ್ದೇವೆ.

ಸತ್ಯಾರ್ಥಪ್ರಕಾಶದಲ್ಲಿ ಸ್ವರಾಜ್ಯದ ಕುರಿತು ಮಾತನಾಡುತ್ತಾ ಅವರು ಸ್ವದೇಶೀ, ಸ್ವಭಾಷಾ, ಸ್ವಬೋಧದ ಹೊರತು ಸ್ವರಾಜ್ಯವಾಗಲು ಸಾಧ್ಯವಿಲ್ಲ ಎಂದು ಬರೆದಿದ್ದಾರೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹರ್ಷಿ ದಯಾನಂದರ ಪ್ರೇರಣೆ ಮತ್ತು ಆರ್ಯ ಸಮಾಜದ ಸಹಭಾಗಿತ್ವ ಅತ್ಯಂತ ಮಹತ್ವಪೂರ್ಣವಾದುದು. ಅನೇಕ ಸ್ವಾತಂತ್ರ್ಯ ಹೋರಾಟಗಾರರು ಮಹರ್ಷಿ ದಯಾನಂದರಿಂದಲೇ ಸ್ಫೂರ್ತಿ ಪಡೆದವರು. 'ಕೃಣ್ವಂತೋ ವಿಶ್ವಮಾರ್ಯಮ್'ನ ಸಂಕಲ್ಪದೊಂದಿಗೆ ಪ್ರಾರಂಭವಾದ ಆರ್ಯಾಸಮಾಜವು ಭಾರತವನ್ನು ಸರಿಯಾದ ಅರ್ಥದಲ್ಲಿ ಆರ್ಯಾವರ್ತ ಅಂದರೆ ಶ್ರೇಷ್ಠ ಭಾರತವನ್ನಾಗಿ ರೂಪಿಸುವಲ್ಲಿ ಮೊದಲ ಪ್ರಾಶಸ್ತ್ಯ ನೀಡಿದೆ.

ಅವರು ಮಹಿಳೆಯರಿಗೆ ಉತ್ತಮ ಸ್ಥಾನ ದೊರಕಿಸಿಕೊಡಲು ಯುಗಾನುಕೂಲ ವ್ಯವಸ್ಥೆಗಳನ್ನು ರೂಪಿಸಿ ಕನ್ಯಾ ಗುರುಕುಲ, ಹೆಣ್ಣುಮಕ್ಕಳ ಪಾಠಶಾಲೆಗಳನ್ನು ಸ್ಥಾಪಿಸಿ, ಆ ಮೂಲಕ ವೇದಗಳ ಅಧ್ಯಯನ ಮಾತ್ರವಲ್ಲದೆ ಹೆಣ್ಣುಮಕ್ಕಳಿಗೆ ಆಧುನಿಕ ಶಿಕ್ಷಣವೂ ದೊರೆಯುವಂತೆ ಮಾಡಿದರು. ಆದರ್ಶ ಜೀವನಶೈಲಿಯನ್ನು ರೂಢಿಸಿಕೊಳ್ಳಲು ಅವರು ಆಶ್ರಮ ವ್ಯವಸ್ಥೆಯನ್ನು (ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ) ಆಗ್ರಹಿಸಿದರಲ್ಲದೆ, ಅದಕ್ಕೆ ಸರಿಯಾದ ನೆಲೆಗಟ್ಟನ್ನು ನೀಡಲು ವ್ಯವಸ್ಥೆಯನ್ನೂ ರೂಪಿಸಿದರು. ಅವರು ದೇಶದ ಯುವ ಪೀಳಿಗೆಯಲ್ಲಿ ತೇಜಸ್ಸು, ಚಾರಿತ್ರ್ಯ ನಿರ್ಮಾಣ, ವ್ಯಸನಮುಕ್ತ, ರಾಷ್ಟ್ರಭಕ್ತಿಯ ಸಂಚಾರ, ಸಮಾಜ ಮತ್ತು ದೇಶದ ಬಗೆಗೆ ಸಮರ್ಪಣೆಯ ನಿರ್ಮಾಣಕ್ಕಾಗಿ ಗುರುಕುಲ ಮತ್ತು ಡಿಎವಿ ವಿದ್ಯಾಲಯಗಳನ್ನು ಸ್ಥಾಪನೆ ಮಾಡಿ ಈ ವಿವರಗಳನ್ನು ಪಸರಿಸುವಲ್ಲಿ ದೊಡ್ಡ ಕ್ರಾಂತಿಯನ್ನೇ ನಡೆಸಿದರು. ಗೋರಕ್ಷಣೆ, ಗೋಪಾಲನೆ, ಗೋಆಧಾರಿತ ಕೃಷಿ, ಗೋ ಸಂವರ್ಧನೆಯ ಕುರಿತಾಗಿ ಅವರ ಆಗ್ರಹಗಳು ಇಂದಿಗೂ ಆರ್ಯ ಸಮಾಜದ ಕಾರ್ಯಗಳಲ್ಲಿ ದೃಷ್ಟಿಗೋಚರವಾಗಿದೆ. ಅವರು ಶುದ್ಧಿ ಆಂದೋಲನವನ್ನು ಆರಂಭಿಸಿ ಧರ್ಮ ಪ್ರಸರಣ ಕಾರ್ಯಕ್ಕೆ ಒಂದು ಹೊಸ ದಿಕ್ಕನ್ನೇ ತೆರೆಸಿದರು,



ಅದು ಇಂದಿಗೂ ಅನುಕರಣೀಯವೇ ಸರಿ. ಮಹರ್ಷಿ ದಯಾನಂದರ ಜೀವನ, ಅವರು ಪ್ರತಿಪಾದಿಸಿದ ಸಿದ್ಧಾಂತದ ಸಾಕಾರ ಸ್ವರೂಪವಾಗಿತ್ತು. ಪರಿಶ್ರಮ, ತ್ಯಾಗ, ಸಮರ್ಪಣೆ, ನಿರ್ಭಯತೆ ಮತ್ತು ನಂಬಿದ್ದ ಸಿದ್ಧಾಂತದ ಕುರಿತು ಜೀವನ ಅವರ ಬದ್ಧತೆ ಅವರ ಜೀವನದ ಪ್ರತಿಕ್ಷಣದ ಮೇಲೂ ಪ್ರತಿಫಲಿತವಾಗಿತ್ತು.

ಮಹರ್ಷಿ ದಯಾನಂದರ ಉಪದೇಶ ಮತ್ತು ಕಾರ್ಯಗಳು ಇಂದಿಗೂ ಪ್ರಸ್ತುತ. ಅವರ ಇನ್ನೂರನೆಯ ಜಯಂತಿಯ ಪಾವನ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಅವರಿಗೆ ಶ್ರದ್ಧಾಪೂರ್ವಕ ವಂದನೆಯನ್ನು ಸಲ್ಲಿಸುತ್ತದೆ. ಎಲ್ಲಾ ಸ್ವಯಂಸೇವಕರು ಈ ಪಾವನ ಸಂದರ್ಭದಲ್ಲಿ ಅವರ ಸ್ಮರಣಾರ್ಥ ಆಯೋಜನೆಗೊಂಡ ಕಾರ್ಯಕ್ರಮದಲ್ಲಿ ಸಂಪೂರ್ಣ ಮನಸ್ಸಿನಿಂದ ಭಾಗವಹಿಸಿ ಅವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘವು ಅಸ್ಪೃಶ್ಯತೆ, ವ್ಯಸನಗಳು ಮತ್ತು ಅಂಧವಿಶ್ವಾಸಗಳಿಂದ ಮುಕ್ತವಾದ ಹಾಗೂ 'ಸ್ವ'ದ ಸಂಸ್ಕಾರಯುಕ್ತ ಓಜಸ್ವಿ ಸಮಾಜದ ನಿರ್ಮಾಣ ಮಾಡಲು ಆ ಮೂಲಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತದೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.